ಸಾಕ್ಷಿ ಪುರಾವೆಗಳ ಸಮೇತ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗುವ ಮೊದಲು, ನಮಗೂ ತಿಳಿಯಬೇಕು, ಎಲ್ಲವೂ ಕ್ರಮಬದ್ಧವಾಗಿದೆಯೇ ಎಂದು. ಈ ಮುರುಗನ್ ಯಾವ ಘಟ್ಟದಲ್ಲಿ ನಿಮ್ಮ ತನಿಖೆ ಪ್ರವೇಶಿಸಿದ, ನಂತರ ಹೇಗೆ ಮುಂದುವರಿಯಿತು'.

'ಸರ್, ತನಿಖೆ ಮಾಡುತ್ತಿರುವಾಗ ನಮ್ಮ ಗಮನ ಮುರುಗನ್ ಮೇಲೆ ಯಾವಾಗ ತಿರುಗಿತೋ ಅಲ್ಲಿಂದ ಹಿಡಿದು ಮುರುಗನ್ ಬಂಧನದ ತನಕ ನಡೆದ ಘಟನೆಗಳು ಬಹಳ ರೋಚಕವಾಗಿವೆ. ಅದನ್ನು ತಮಗೆ ವಿವರವಾಗಿ ಹೇಳ್ತೀನಿ. ಯಾಕಂದರೆ ಇದರ ಜೊತೆಗೆ ಇನ್ನಷ್ಟು ಗಂಭೀರ ಅಪರಾಧಗಳು ತಳುಕು ಹಾಕಿಕೊಂಡಿವೆ. ಅವೆಲ್ಲವನ್ನೂ ನಾವು ಬಗೆಹರಿಸಿದ್ದೀವಿ ಸರ್'.

'ನಮಗೂ ಕುತೂಹಲ ಇದೆ. ಅದಕ್ಕೆ ಮುಂಚೆ ಈ ಕಾಫಿ–ತಿಂಡಿ ಬ್ರೇಕ್ ಆಗಲಿ'.

17

ಕಾಫಿ–ತಿಂಡಿ ಸಮಾರಾಧನೆ ಇನ್ನೇನು ಮುಗಿಯುವುದಿತ್ತು. ಎಸ್.ಪಿ. ಸಾಹೇಬರು ಹೇಳಿದಂತೆ ತನಿಖೆ ಕವಲೊಡೆದು ಮತ್ತೊಂದು ದಿಕ್ಕಿಗೆ ತಿರುಗಿತ್ತು, ನಾಲ್ಕು ದಿನಗಳ ಹಿಂದೆ. ಹಾಗೆಂದು ಅಲ್ಲಿಯ ತನಕ ಸಾಗಿದ್ದ ತನಿಖೆಯ ಆಯಾಮಗಳನ್ನು ಅಲಕ್ಷಿಸಿರಲಿಲ್ಲ ಮಾಯಣ್ಣ. ತನಿಖೆಯು ಈ ತಿರುವು ಪಡೆದುಕೊಂಡಿದ್ದು ಆ ಒಂದು ಸಣ್ಣ ಘಟನೆಯಿಂದ. ಆ ದಿನ ಎಂದಿನಂತೆ ಬೆಳಿಗ್ಗೆ ಠಾಣೆಗೆ ಬಂದ ಮಾಯಣ್ಣ ತನ್ನ ಕೋಣೆಯನ್ನು ಪ್ರವೇಶಿಸುತ್ತಿದ್ದಂತೆ ಸಹಿಸಲಾಗದಂಥ ಗಬ್ಬು ವಾಸನೆ ಬರುತ್ತಿತ್ತು. ಹೊರಗೆ ಒಂದು ರೈಟರ್ ಕುಮಾರನನ್ನು ವಿಚಾರಿಸಲು, ತನ್ನ ಕೋಣೆಯ ಕಿಟಕಿಯಾಚೆಗಿನ ಖಾಲಿ ಸೈಟಿನಲ್ಲಿ ಮೇಯುತ್ತಿದ್ದ ಹಸುಗಳು ಹಾಕಿದ್ದ ಸಗಣಿಯ ವಾಸನೆ ಎಂದು ತಿಳಿಯಿತು.

ಹಸುಗಳಿಗೆ ಕಾಲು–ಬಾಯಿ ರೋಗ ಬಂದಾಗ, ಅವುಗಳ ಸೆಗಣಿಯ ಗಬ್ಬು ತಡೆಯಕಾಗಲ್ಲ.

'ಸರ್, ಒಂದು ಸಾರಿ ಆ ಪಕ್ಕದ ಸೈಟ್ ನೋಡಿ ಸರ್. ಕಾಂಗ್ರೆಸ್ ಗಿಡದ ಪೊದೆಗಳು, ಅರಳು ಗಿಡಗಳು ಎಲ್ಲಾ ಬೆಳೆದು, ಕಸ–ಗಲೀಜು ಸೇರ್ಕೊಂಡು ತೊಟ್ಟಿ ಆಗೋಗಿದೆ. ಆ ಖಾಲಿ ಸೈಟ್ ಓನರ್‌ನ ಕರಸಿ ಉಗುದು ಕ್ಲೀನ್ ಮಾಡುಸ್ಲಾ ಸರ್?'

'ಅದಕ್ಕೆಲ್ಲ ನನ್ ಪರ್ಮಿಷನ್ ಬೇಕೇನ್ರೀ?' ಎನ್ನುತ್ತಾ ತಾನೇ ತಾರಸಿಗೋಗಿ ಅಲ್ಲಿನ ಅಂಚು ಗೋಡೆ ಬದಿಗೆ ನಿಂತು ಆಚೆಗಿನ ಆ ಖಾಲಿ ಸೈಟ್ ನೋಡಲು, ಅಲ್ಲೊಂದು ಅಚ್ಚರಿ ಕಾದಿತ್ತು ಮಾಯಣ್ಣನಿಗೆ. ಪಕ್ಕದ ಸೈಟಿಗೆ ಹೆಚ್ಚು ಕಡಿಮೆ ಅಂಟಿಕೊಂಡಂತಿದ್ದ ಮಾಯಣ್ಣನ ಕೋಣೆಯ ಕಿಟಕಿಯ ಪಕ್ಕಕ್ಕೆ, ಒಳಗಿನಿಂದ ಬರುವ ಮಾತುಕತೆಗಳನ್ನು ಕದ್ದಾಲಿಸುವಂತೆ, ನೆಲದ ಮೇಲೆ ಒಂದು ಸೈಜುಕಲ್ಲು ಹಾಕಿ ಕುಳಿತಿದ್ದ ಮುರುಗನ್. ಸುತ್ತಲಿನ ಆಳೆತ್ತರದ ಅರಳು ಗಿಡಗಳ ಹಸಿರು ಕೋಟೆಯಿಂದಾಗಿ ಅವನು ಯಾರ ಕಣ್ಣಿಗೂ ಬೀಳುವಂತಿರಲಿಲ್ಲ. ಆ ಗಲೀಜು ಜಾಗದಲ್ಲಿ, ಆ ಗಬ್ಬು ನಾತದಲ್ಲಿ ಅಷ್ಟು ತಲ್ಲೀನತೆಯಿಂದ ಕದಲದಂತೆ ಕೂತಿದ್ದ ಅವನ ಉದ್ದೇಶ ಸ್ಪಷ್ಟವಾಗಿತ್ತು. ಆ ಕ್ಷಣದಲ್ಲಿ ಮಾಯಣ್ಣನ ತನಿಖೆ ಕವಲೊಡೆದಿತ್ತು. ಎಚ್ಚೆತ್ತ ಮಾಯಣ್ಣ ತಕ್ಷಣ ಕೆಳಗಿಳಿದು ವಿನಯ್‌ನನ್ನ ಕರೆಸಿದ.

'ವಿನಯ್, ನೀವು ಈಗಲೇ ಜಯಂತನ ಫ್ಯಾಕ್ಟರಿಗೆ ಹೋಗಿ ಅಲ್ಲಿ ಯಾರಾದರೂ ಸರಿಯಾದವನನ್ನ ಹುಡುಕಿ ಮುರುಗನ್ ಚರಿತ್ರೆಯನ್ನು ತೆಗೆಸಿ ತಲಾಶ್ ಮಾಡಿ. ಅದು ಮುರುಗನ್‌ಗೆ ಗೊತ್ತಾಗಬಾರದು. ಮೊದಲಿನಿಂದಲೂ ಇದ್ದು ಈಗ ಕೆಲಸದಿಂದ ವಜಾ ಆದವರು ಯಾರಾದರೂ ಸಿಕ್ಕರೆ ಉತ್ತಮ. ಮಫ್ತಿಯಲ್ಲೋಗಿ. ಸೂಕ್ಷ್ಮವಾಗಿ ಆಗಬೇಕು ಇದು. ಏನು?'

'ಯೆಸ್ ಸಾರ್'.

ಇದರಿಂದ ಇಷ್ಟಂತೂ ಸ್ಪಷ್ಟವಾಗಿತ್ತು. ಮುರುಗನ್ ಈ ತನಿಖೆಯನ್ನು ಅತೀವ ಆಸಕ್ತಿಯಿಂದ ಗಮನಿಸುತ್ತಿದ್ದಾನೆ ಎಂದು.

ಇದಕ್ಕೆ ಮೂರು ಕಾರಣಗಳಿರಬಹುದೆಂದು ಮಾಯಣ್ಣ ತರ್ಕಿಸಿದ.

ಒಂದು– ತನ್ನ ಧಣಿ ಜಯಂತನು ಈ ಪ್ರಕರಣದಲ್ಲಿ ಸಿಕ್ಕಿಬಿದ್ದಾನೆಂಬ ಕಾಳಜಿಯಿಂದ.

ಎರಡು– ತಾನೇ ಇನ್ಯಾರದೊ ಪರವಾಗಿ ದಾಕ್ಷಿಣ್ಯಕ್ಕೋ, ದಕ್ಷಿಣೆಗೋ ಈ ಕೊಲೆಯೆಸಗಿರಬಹುದೆಂದು.

ಮೂರು– ಸ್ವತಃ ತನಗೇ ಈ ಕೊಲೆಯೆಸಗಲು ಏನಾದರೂ ಕಾರಣಗಳಿರಬಹುದೇ ಎಂದು.

ಕೊನೆಯ ಎರಡು ಕಾರಣಗಳು ತರ್ಕಕ್ಕೆ ಹೆಚ್ಚು ಸನಿಹವಿದ್ದಂತಿತ್ತು. ಮಧ್ಯಾಹ್ನದ ವೇಳೆಗೆ ವಿನಯ್ ಹೇಳಿದ ಕೆಲಸ ಚೊಕ್ಕವಾಗಿ ಮುಗಿಸಿ ಬಂದಿದ್ದ.

'ಸಾರ್, ವಿಚಾರಿಸಿದ್ದೀನಿ. ಜಯಂತನ ತಂದೆಯ ಕಾಲದಿಂದಲೂ ಕೆಲಸ ಮಾಡ್ತಿದ್ದ ವೆಂಕಟಸ್ವಾಮಿ ಅನ್ನೋ ಒಬ್ಬ ಪ್ರಾಮಾಣಿಕ ಹಾಗೂ ನುರಿತ ಕೆಲಸಗಾರನನ್ನ, ಈ ಮುರುಗನ್ ಮಾತು ಕೇಳ್ಕೊಂಡು, ಜಯಂತ್ ತಿಂಗಳ ಹಿಂದೆ ಕೆಲಸದಿಂದ ತೆಗೆದುಹಾಕಿದ್ದಾರೆ. ಸದ್ಯಕ್ಕೆ ಆತ ಅವರ ಹಳ್ಳಿಗೆ ಹೋಗಿ ಸೆಟಲ್ ಆಗಿದ್ದಾರೆ. ಅವರ ಫೋನ್ ನಂಬರ್ ತಂದಿದ್ದೀನಿ ಸರ್...'

'ಗುಡ್ ವರ್ಕ್ ವಿನಯ್'.

'ಥ್ಯಾಂಕ್ಸ್ ಸರ್'.

ತದನಂತರ ಮಾಯಣ್ಣ ಮತ್ತು ವೆಂಕಟಸ್ವಾಮಿ ನಡುವೆ ನಡೆದ ಸುದೀರ್ಘ ಫೋನ್ ಸಂಭಾಷಣೆಗಳ ಸಾರಾಂಶವೇನೆಂದರೆ, ಮುರುಗನ್ ಹೆಂಡತಿ ಆತ್ಮಹತ್ಯೆ ಮಾಡಿಕೊಂಡ ನಂತರ ತನ್ನ ಒಬ್ಬಳೇ ಮಗಳನ್ನು ಬೋರ್ಡಿಂಗ್ ಸ್ಕೂಲಿಗೆ ಹಾಕಿ, ತನ್ನ ಊರಾದ ಮಧುರೈ ಬಿಟ್ಟು ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬಂದವನು, ನೇರ ಜಯಂತನ ತಂದೆಯ ಫ್ಯಾಕ್ಟರಿಗೆ ಸೇರಿಕೊಂಡಿದ್ದ. ಇತ್ತ ಜಯಂತನ ತಂದೆಯ ಅಕಾಲ ಮರಣದ ನಂತರ, ಧುತ್ತನೆ ತಲೆಯ ಮೇಲೆ ಬಿದ್ದ ಫ್ಯಾಕ್ಟರಿಯ ಕಸುಬು ಮತ್ತು ಆಡಳಿತದ ಬಗ್ಗೆ, ಅಗತ್ಯವಿರುವಷ್ಟು ಅರಿವು, ಅನುಭವ, ಆಸ್ಥೆಗಳಿಲ್ಲದ ಜಯಂತ, ಕೆಲಸದಲ್ಲಿ ನುರಿತ ಮತ್ತು ವ್ಯವಹಾರಗಳಲ್ಲಿ ಚಾಣಾಕ್ಷನಾಗಿದ್ದ ಮುರುಗನ್‌ನನ್ನು ಅತಿಯಾಗಿ ಅವಲಂಬಿಸಿದ್ದ. ಎಷ್ಟರಮಟ್ಟಿಗೆ ಎಂದರೆ ದೈನಂದಿನ ಮೇಲುಸ್ತುವಾರಿಯಿಂದ, ಫ್ಯಾಕ್ಟರಿಗೆ ಕಚ್ಚಾವಸ್ತುಗಳ ಖರೀದಿಯಿಂದ, ಕಾರ್ಮಿಕರ ನಿಗಾವಣೆಯಿಂದ ಹಿಡಿದು, ಟೆಂಡರ್ ಪ್ರಕ್ರಿಯೆಯಾದಿಯಾಗಿ ಎಲ್ಲವೂ ಇವನ ಸುಪರ್ದಿನಲ್ಲಿಯೇ ಇತ್ತು. ಮೊದಮೊದಲು ಎಲ್ಲವನ್ನೂ ಸುಗಮವಾಗಿ ನಡೆಸಿ, ಜಯಂತನ ನಂಬಿಕೆ ವಿಶ್ವಾಸಗಳನ್ನು ಗಿಟ್ಟಿಸಿದ್ದ ಮುರುಗನ್ ಮೂರೇ ತಿಂಗಳಲ್ಲಿ ತನ್ನ ಚಾಲು ಶುರು ಮಾಡಿದ್ದ. ಒಲ್ಲದ, ಒಗ್ಗದ ಹಳೇ ಕಾರ್ಮಿಕರನ್ನೆಲ್ಲಾ ಓಡಿಸಿ, ತನ್ನೂರಿನಿಂದ ಕರೆ ತಂದ ಬಂಟರನ್ನೇ ತುಂಬಿ ಕ್ರಮೇಣ ಫ್ಯಾಕ್ಟರಿಯ ಮೇಲೆ ಬಿಗಿಹಿಡಿತ ಸಾಧಿಸಿದ್ದ. ತನ್ನ ಬಾಮೈದ ವೇಲುವನ್ನು ಕರೆಸಿ 'ವೇಲ್ ಮುರುಗನ್ ಇಂಡಸ್ಟ್ರೀಸ್' ಎಂಬ ಹೆಸರಿನ ಇವನದೇ ಖಾಸಾ ಫ್ಯಾಕ್ಟರಿಯನ್ನು ಹುಟ್ಟುಹಾಕಿದ್ದ.

ಮುರುಗನ್‌ಗೆ ಯಾವುದೇ ಯಂತ್ರವನ್ನು ಕೆಡಿಸುವಷ್ಟು ಕುಟಿಲತೆ, ಮತ್ತೆ ಅದನ್ನು ರಿಪೇರಿ ಮಾಡುವಷ್ಟು ಕೌಶಲ್ಯ ಎರಡೂ ಇತ್ತು. ಜಯಂತನ ಫ್ಯಾಕ್ಟರಿಗೆ ಬರುವ ಕೆಲಸಗಳಲ್ಲಿ, ಲಾಭ ತರುವ ಕೆಲಸಗಳನ್ನೆಲ್ಲಾ ಅತ್ತ, ನಷ್ಟಕ್ಕೆ ದೂಡುವ ಕೆಲಸಗಳೆಲ್ಲಾ ಇತ್ತ ಎಂಬ ಸಿದ್ಧ ಸೂತ್ರದಡಿ ವಿಂಗಡಿಸಿ ಹಂಚುತ್ತಿದ್ದ. ಸಾಲದ ಸುಳಿಗೆ ಸಿಕ್ಕ ಜಯಂತನ ಫ್ಯಾಕ್ಟರಿ ಹಳ್ಳ ಹಿಡಿದಿದ್ದರೆ, ಅತ್ತ 'ವೇಲ್ ಮುರುಗನ್ ಇಂಡಸ್ಟ್ರೀಸ್' ಏರುಗತಿಯಲ್ಲಿತ್ತು. ಹಂತ ಹಂತವಾಗಿ ಜಯಂತನ ಫ್ಯಾಕ್ಟರಿಯನ್ನು ಕೃಶವಾಗಿಸಿ, ಸಾಲದ ಹೊರೆಯನ್ನು ಬೆಟ್ಟದಷ್ಟು ಬೆಳೆಸಿ, ಮಾರಲೇಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿ, ನಂತರ ತಾನೇ ಕಬಳಿಸುವ ಹುನ್ನಾರವಾಗಿತ್ತು. ಆದರೆ ಯಾವಾಗ ಅಮ್ಮು ಜಯಂತನ ಜೀವನ ಪ್ರವೇಶಿಸಿ, ಅವನ ಫ್ಯಾಕ್ಟರಿ ನಿರ್ವಹಣೆಯ ಸಹಾಯಕ್ಕೂ ನಿಂತಳೋ, ಆಗಲೇ ಅವಳ ತೀಕ್ಷ್ಣಮತಿಗೆ, ಅಲ್ಲಿ ನಡೆಯುತ್ತಿದ್ದ ಅಕ್ರಮ–ಅವ್ಯವಸ್ಥೆಗಳ ಘಾಟು ಬಡಿದಿತ್ತು.

ಸ್ವತಃ ತಾನೇ ಎಂಬಿಎ ಪದವೀಧರೆಯಾದ ಅವಳಿಗೆ, ವ್ಯವಸ್ಥೆಯನ್ನು ಬಾಧಿಸುತ್ತಿದ್ದ ಒಳಸುಳಿಗಳು ಮತ್ತು ಕಂಟಕಗಳನ್ನು ಪತ್ತೆ ಹಚ್ಚಿ ಅದರ ಮೂಲಬಿಂದುವನ್ನು ಗುರುತಿಸಿ, ಎಲ್ಲವನ್ನು ಶೀಘ್ರದಲ್ಲೇ ದುರಸ್ತಿಗೊಳಿಸುವುದು ಅಷ್ಟೇನೂ ಕಷ್ಟವಾಗಿರಲಿಲ್ಲ. ಮುರುಗನ್ ಕಷ್ಟಪಟ್ಟು ಕೆಳಗಿಳಿಸಿದ್ದ ಅವನ ಆದಾಯದ ಆಳವಾದ ಬೇರುಗಳನ್ನೇ ಕತ್ತರಿಸಿ ಬಿಟ್ಟಿದ್ದಳು ಅಮ್ಮು.

ಕಾರ್ಮಿಕರ ಹಿತಾಸಕ್ತಿ ಮತ್ತು ಸುರಕ್ಷತೆ ಕಾಪಾಡುವ ಕೆಲವಾರು ಕ್ರಮಗಳು ಅನುಷ್ಠಾನಕ್ಕೆ ಬಂದಿತ್ತು. ಮುರುಗನ್ ಎಲ್ಲಾ ಕಾರ್ಮಿಕರನ್ನೂ ಇಎಸ್‌ಐ, ಪಿಎಫ್ ಮತ್ತು ಇತರೆ ಸೌಲಭ್ಯಗಳಿಗೆ ಒಳಪಡಿಸಿರಲಿಲ್ಲ. ಈ ಕಾರಣಕ್ಕಾಗಿ ಆತನಿಗೆ ಎಲ್ಲರ ಮುಂದೆ ಅಮ್ಮುವಿನಿಂದ ಛೀಮಾರಿಯಾಗಿ ತೀವ್ರ ಮುಖಭಂಗವಾಗಿತ್ತು.

ಅಮ್ಮುವಿನ ಸದುದ್ದೇಶದ ನಡೆಗಳನ್ನು ಗಮನಿಸಿದ್ದ ಬಹುತೇಕ ಕಾರ್ಮಿಕರು ಅಮ್ಮುವಿಗೆ ಸಹಜವಾಗಿಯೇ ಸಂಪೂರ್ಣ ಸಹಕಾರದಿಂದ ಸ್ಪಂದಿಸಿದ್ದರು. ಕ್ರಮೇಣ ಫ್ಯಾಕ್ಟರಿಯಲ್ಲಿ ಮುರುಗನ್‌ನ ಪ್ರಾಮುಖ್ಯತೆ ಗೌಣವಾಗಿತ್ತು. ಮುರುಗನ್‌ಗೆ ಇನ್ನೇನು ಎಲ್ಲವೂ ಕೈಗೂಡಿತು